ಕರ್ನಾಟಕ ಸರ್ಕಾರ

# ಆಯುಕ್ತಾಲಯ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು

"ಆರೋಗ್ಯ ಸೌಧ", 6ನೇ ಮಹಡಿ, 1ನೇ ಅಡ್ಡ ರಸ್ತೆ, ಮಾಗಡಿ ರಸ್ತೆ, ಬೆಂಗಳೂರು – 23

ಪತ್ರ ಸಂ: **E-H/CC Camera /66/2019-20** ದಿನಾಂಕ: 07.05.2021

## ಸುತ್ತೋಲೆ

ವಿಷಯ : ವಾರ್ಡ್ ಮತ್ತು ಐಸಿಯುಗಳಲ್ಲಿ ಸಿಸಿ ಟಿವಿ ಅಳವಡಿಸುವ ಬಗ್ಗೆ.

ಉಲ್ಲೇಖ: 1.ಪೋಲೀಸ್ ಆಯುಕ್ತರು, ಬೆಂಗಳೂರು ನಗರ ರವರ ಪತ್ರ ಸಂಖ್ಯೆ: ಅ.ಸ. ಪತ್ರ.ಸಂ 253/ಸಿಸಿಆರ್/ರಿವ್ಯೂ/2019 ದಿನಾಂಕ: 11.12.2020.

2. 15.02.2020 ರಂದು ಜರುಗಿದ ಸಿಸಿ ಟಿವಿ ಅಳವಡಿಸುವ ಕುರಿತ ಸಭೆಯ ನಡಾವಳಿಯಂತೆ.

3.ಸಮ ಸಂಖ್ಯೆ ಪತ್ರ ದಿನಾಂಕ: 09.07.2020

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ದಿನಾಂಕ: 07.05.2021 ರಂದು ಕೋವಿಡ್-19 ರ ನಿಯಂತ್ರಣ ಹಾಗೂ ಮೆಲ್ವಿಚಾರಣೆ ಸಭೆಯಲ್ಲಿ ಸೂಚಿಸಿದಂತೆ ಎಲ್ಲಾ ಜಿಲ್ಲಾ ಹಾಗೂ ತಾಲ್ಲೂಕು ಆಸ್ಪತ್ರೆಗಳ ವಾರ್ಡ್ ಮತ್ತು ಐಸಿಯುಗಳಲ್ಲಿ ದಿನಾಂಕ: 11.05.2021 ರ ಒಳಗೆ ಸಿಸಿ ಟಿವಿ ಅಳವಡಿಸಿಕೊಳ್ಳಲು ಸದರಿ ಆಸ್ಪತ್ರೆಗಳ ನಿರ್ದೇಶಕರು/ವೈದ್ಯಕೀಯ ಮಹಾ ವಿದ್ಯಾಲಯ/ಜಿಲ್ಲಾ ಶಸ್ತ್ರಚಿಕಿತ್ಸಕರು/ಆಡಳಿತ ವೈದ್ಯಾಧಿಕಾರಿಗಳಿಗೆ ಸೂಚಿಸಿದೆ. ಉಲ್ಲೇಖ (3)ರಲ್ಲಿ ಈಗಾಗಲೇ ಸಿಸಿ ಟಿವಿಗೆ ಸಂಬಂಧಿಸಿದ ತಾಂತ್ರಿಕ ವೈಶಿಷ್ಟಗಳ ವಿವರ ನೀಡಲಾಗಿದ್ದು, ಮತ್ತೊಮ್ಮೆ ಈ ಸುತೋಲೆಯೊಂದಿಗೆ ನೀಡಲಾಗಿದೆ.

ವಾರ್ಡ್, ಐಸಿಯು ಸೇರಿ ಸಿಸಿ ಟಿವಿ ಅಳವಡಿಸಿಕೊಳ್ಳಲು ತಗಲುವ ವೆಚ್ಚವನ್ನು ಆರೋಗ್ಯ ರಕ್ಷಾ ಸಮಿತಿ ಅನುದಾನದಿಂದ ಅಥವಾ ಆಸ್ಪತ್ರೆಯ ಲಭ್ಯವಿರುವ ಇತರೇ ಅನುದಾನದಿಂದ ಭರಿಸಿಕೊಳ್ಳಲು ಸೂಚಿಸಿ ಆದೇಶಿಸಿದೆ. ತೆಗೆದುಕೊಂಡ ಕ್ರಮದ ಬಗ್ಗೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು ಹಾಗೂ ಸದರಿ ಜಿಲ್ಲೆಗಳ ನೋಡಲ್ ಅಧಿಕಾರಿಗಳು ಪರಿಶೀಲಿಸಿ ದಿನಾಂಕ: 12.05.2021 ರ ಒಳಗೆ ವರದಿ ಸಲ್ಲಿಸುವುದು.

ಆಯುಕ್ತರು,

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು.

ಪ್ರತಿಯನ್ನು ಸೂಕ್ತ ಕ್ರಮಕ್ಕಾಗಿ:

1. ಎಲ್ಲಾ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು,
2. ಎಲ್ಲಾ ಜಿಲ್ಲಾ ಶಸ್ತ್ರಚಿಕೀತ್ಸಕರು/ವೈದ್ಯಕೀಯ ಅಧೀಕ್ಷಕರು/ ನೋಡಲ್ ಅಧಿಕಾರಿಗಳು ಹಾಗೂ ಆಡಳಿತ ವೈದ್ಯಾಧಿಕಾರಿಗಳು.